ದಿಃ29-04-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲು: ವಾದಿಯರ ಪರ ಶ್ರೀ ಜಿ.ಎಸ್.ಎಸ್. ವಕೀಲರಿಂದಃ

ನಾನು 7 ತಿಂಗಳಿನಿಂದ ಹೊಳಲ್ಕೆರೆಯ ಎಸ್.ಬಿ.ಐ. ಬ್ಯಾಂಕಿನ ಶಾಖಾ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಮ್ಮ ಬ್ಯಾಂಕು ಆರ್.ಬಿ.ಐ.ನ ನಿರ್ಧೇಶನದಂತೆ ಕಾರ್ಯ ನಿರ್ವಹಿಸುತ್ತದೆ ಎಂದರೆ ಸರಿ. ಆರ್.ಬಿ.ಐ. ನಿರ್ಧೇಶನದ ಪ್ರಕಾರ ನಮ್ಮ ಬ್ಯಾಂಕಿನ ಆಂತರಿಕ ಲೆಕ್ಕ ಪರಿಶೋಧನ ವರದಿಯನ್ನು ನಡೆಸುತ್ತಾರೆ ಎಂದರೆ ಸರಿ. ನಮ್ಮ ಬ್ಯಾಂಕಿನ ಲೆಕ್ಕ ಪರಿಶೋಧನಾ ವರದಿಯಂತೆ ನಮ್ಮ ಬ್ಯಾಂಕಿನ ಆರ್ಥಿಕ ಸ್ಥಿತಿ 2012 ರಿಂದ 2014 ರವರೆಗತೆ ಯಾವ ಪರಿಸ್ಥಿತಿಯಲ್ಲಿ ಇತ್ತು ಎಂದು ಗೊತ್ತಿದೆ. ನಮ್ಮ ಬ್ಯಾಂಕಿನ ಲೆಕ್ಕ ಪರಿಶೋಧನಾ ವರದಿ 2012 ರಿಂದ 2014 ರವರೆಗೆ ಯಾವ ಸಮಯದಲ್ಲಿ ನಡೆದಿತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವರ್ಷದ ಲೆಕ್ಕ ಪರಿಶೋಧನಾ ವರದಿಯ ಕುರಿತು ಆಕ್ಷೇಪಣೆಗಳು ಇದ್ದಲ್ಲಿ ಆ ಕುರಿತು ಕಡತವನ್ನು ಇಟ್ಟಿರುತ್ತೇವೆ ಎಂದರೆ ಸರಿ. ನಾನು ನಮ್ಮ ಬ್ಯಾಂಕಿನ 2012 ರಿಂದ 2014 ರವರೆಗಿನ ಲೆಕ್ಕ ಪರಿಶೋಧನಾ ವರದಿಯ ಆಕ್ಷೇಪಣೆಗಳ ಕುರಿತು ನೋಡಿಲ್ಲ.

2. ನಮ್ಮ ಬ್ಯಾಂಕಿನಲ್ಲಿ ಈ ದಾವೆಯ ವಾದಿಯಾದ ಶಿವಣ್ಣರವರ ಮಗನ ವಿದ್ಯಾಭ್ಯಾಸದ ಕುರಿತು ಶೈಕ್ಷಣಿಕ ಸಾಲವನ್ನು ಪಡೆದಿದ್ದಾರೆ ಎಂದರೆ ಸರಿ. ಸದರಿ ಸಾಲವನ್ನು ಮರುಪಾವತಿ ಮಾಡಿಲ್ಲ ಎಂದು ವಾದಿ ಮತ್ತು ಆತನ ಮಗನ ವಿರುದ್ಧ ಈ ನ್ಯಾಯಾಲಯದಲ್ಲಿ ಹಣದ ವಸೂಲಾತಿಗಾಗಿ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿ. ನಮ್ಮ ಬ್ಯಾಂಕಿನಿಂದ ಅಡಮಾನದ ಕುರಿತು ಸಾಲ ನೀಡಿದ್ದಲ್ಲಿ ಸದರಿ ಸಾಲದ ಸ್ವತ್ತಿನ ಕುರಿತಾಗಿ ಪ್ರತಿವರ್ಷ ಋಣಭಾರ ರಾಹಿತ್ಯದ ಕುರಿತು ಪರಿಶೀಲನೆ ಮಾಡುತ್ತೇವೆ ಎಂದರೆ ಸರಿ. ಗೃಹ ಸಾಲದ ಕುರಿತಾಗಿ ಮೊದಲನೇ ಕಂತಿನ ಹಣವನ್ನು ಹೊರತುಪಡಿಸಿ ಆನಂತರದಲ್ಲಿ ನೀಡುವ ಕಂತಿನ ಹಣದ ಕುರಿತು ಶಾಖಾ ಪ್ರಬಂಧಕರು ಮತ್ತು ಕ್ಷೇತ್ರಾಧಿಕಾರಿಗಳು ಪರಿಶೀಲನೆ ಮಾಡಬೇಕು ಎಂದರೆ ಸರಿ. ಆರ್.ಬಿ.ಐ. ನಿರ್ದೇಶನದಂತೆ ಗೃಹ ಸಾಲದ ಕುರಿತು ಸಾಲ ಮಂಜೂರಾತಿ ಮಾಡಿದಾಗ ಮನೆಯ ಅಥವಾ ಕಟ್ಟಡದ ನಿರ್ಮಾಣದ ಹಂತದ ಕುರಿತು ಶಾಖಾ ಪ್ರಬಂಧಕರು ಮತ್ತು ಕ್ಷೇತ್ರಾಧಿಕಾರಿಗಳು ಸ್ಥಳಕ್ಕೆ ಭೇಟಿನೀಡಿ ಸದರಿ ಕಟ್ಟಡದ ಖುದ್ದು ಪರಿಶೀಲನೆಯನ್ನು ಮಾಡಿ, ತಾವುಗಳು ಇರುವಂತೆ ಛಾಯಾಚಿತ್ರವನ್ನು ತೆಗೆದು ವರದಿ ನೀಡಬೇಕು ಎಂದರೆ ಸರಿ.

3. ನಿಪಿ.16 ರ ವರದಿಯೊಂದಿಗೆ ಹಾಜರುಪಡಿಸಿರುವ 7 ಛಾಯಾಚಿತ್ರಗಳಲ್ಲಿ ನಮ್ಮ ಬ್ಯಾಂಕಿನ ಶಾಖಾ ಪ್ರಬಂಧಕರು ಮತ್ತು ಕ್ಷೇತ್ರಾಧಿಕಾರಿಗಳು ಹಾಗೂ ಸಿಬ್ಬಂಧಿಗಳು ಇಲ್ಲ ಎಂದರೆ ಸರಿ. ಸದರಿ ಛಾಯಾಚಿತ್ರಗಳಲ್ಲಿ ವಾದಿಯ ಅಸ್ತಿತ್ವ ಸಹ ಇಲ್ಲ ಎಂದರೆ ಸರಿ. ಛಾಯಾಚಿತ್ರಗಳನ್ನು ಸಲ್ಲಿಸಿದ ನಂತರದಲ್ಲಿ ಸಿವಿಲ್ ಅಭಿಯಂತರರು ವರದಿಯನ್ನು ಸಲ್ಲಿಸಿದ ನಂತರದಲ್ಲಿ ಸಾಲವನ್ನು ಕಂತಿನ ರೂಪದಲ್ಲಿ ಬಿಡುಗಡೆ ಮಾಡುತ್ತೇವೆ ಎಂದರೆ ಸರಿ. ನಿಪಿ.16 ರ ವರದಿಯಲ್ಲಿ ವಾದಿಯು ಕಂತುಗಳ ಹಣವನ್ನು ಬಿಡುಗಡೆ ಮಾಡಿರುವ ಬಗ್ಗೆ ಪತ್ರಗಳನ್ನು ಬರೆದಿರುತ್ತಾರೆ ಎಂದರೆ ಸರಿ. ವಾದಿಯು ನೀಡಿರುವ ಪತ್ರಗಳ ಆಧಾರದಲ್ಲಿ ಹಣವನ್ನು ಬಿಡುಗಡೆ ಮಾಡಿದ್ದಾರೆ ಎಂದರೆ ಸಾಕ್ಷಿ ಸಿವಿಲ್ ಅಭಿಯಂತರರು ಸಹ ವರದಿಯನ್ನು ನೀಡಿರುತ್ತಾರೆ ಎಂದು ಹೇಳುತ್ತಾರೆ. ಸಿವಿಲ್ ಅಭಿಯಂತರರು ಸ್ಥಳ ಪರಿಶೀಲನೆ ಮಾಡಿರುವ ಕುರಿತು ವರದಿಯೊಂದಿಗೆ ಛಾಯಾಚಿತ್ರವನ್ನು ಹಾಜರುಪಡಿಸಿಲ್ಲ.

4. ಪ್ರತಿವಾದಿಯು ನಮ್ಮ ಬ್ಯಾಂಕಿನಿಂದ ಸಾಲ ಪಡೆದುಕೊಂಡ ನಂತರ ಸದರಿ ಸ್ವತ್ತಿನ ಕುರಿತು ಪ್ರತಿವಾದಿಯು ವಾದಿಗೆ ಮಾರಾಟ ಮಾಡಿರುವ ಕುರಿತು ನಮ್ಮ ಬ್ಯಾಂಕಿಗೆ ತಿಳಿದುಬಂದಿದ್ದು, ನಮ್ಮ ಬ್ಯಾಂಕಿನವರು ಪ್ರತಿವಾದಿಗೆ ನೋಟೀಸನ್ನು ನೀಡಿದ್ದ ನಂತರದಲ್ಲಿ ಪ್ರತಿವಾದಿಯು ಬೇರೆ ಬ್ಯಾಂಕಿನಲ್ಲಿ ಸಾಲ ಪಡೆದುಕೊಂಡು ನಮ್ಮ ಬ್ಯಾಂಕಿನ ಸಾಲವನ್ನು ತೀರುವಳಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಫೆಡರಲ್ ಖಾಸಗಿ ಬ್ಯಾಂಕ್ ಎಂದರೆ ಸರಿ. ಪ್ರತಿವಾದಿಯು ಫೆಡರಲ್ ಬ್ಯಾಂಕಿನಿಂದ ಸಾಲ ಪಡೆದುಕೊಂಡು ನಮ್ಮ ಬ್ಯಾಂಕಿಗೆ ಹಣವನ್ನು ಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಪ್ರತಿವಾದಿಯು ಸಾಲದ ಹಣವನ್ನು ಮರುಪಾವತಿ ಮಾಡಿದ್ದು, ಯಾವ ರೀತಿ ಮರುಪಾವತಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಹಾಜರುಪಡಿಸಿರುವ ನಿಪಿ.17 ರ ದಾಖಲಾತಿಯಂತೆ ಪ್ರತಿವಾದಿ ಪಡೆದಿದ್ದ ಸಾಲದ ಹಣ ನಮ್ಮ ಬ್ಯಾಂಕಿಗೆ ಫೆಡರಲ್ ಬ್ಯಾಂಕ್‌ರವರಿಂದ ಪಾವತಿಯಾಗಿದೆ ಎಂದರೆ ಸರಿ.

5. ಪ್ರತಿವಾದಿ ನಮ್ಮ ಬ್ಯಾಂಕಿಗೆ ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಿರುವ ಕುರಿತು ಯಾವುದೇ ವರದಿಯನ್ನು ನೀಡಿಲ್ಲ. ಪ್ರತಿವಾದಿ ನಮ್ಮ ಬ್ಯಾಂಕಿಗೂ ಸಹ ಮೋಸ ಮಾಡಿರುವ ಕುರಿತು ತಿಳಿದುಬಂದ ನಂತರದಲ್ಲಿ ನಮ್ಮ ಬ್ಯಾಂಕಿನವರು ಪ್ರತಿವಾದಿಗೆ ನೋಟೀಸು ನೀಡಿದ ನಂತರ ಪ್ರತಿವಾದಿ ಸಾಲವನ್ನು ಮರುಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಮೋಸ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿ ಪಡೆದಿದ್ದ ಸಾಲದ ಕುರಿತು ಹಾಗೂ ಮರುಪಾವತಿ ಮಾಡಿದ ಪ್ರಕ್ರಿಯೆಯ ಕುರಿತು 2012 ರಿಂದ 2014 ರವರೆಗೆ ಶಾಖಾ ಪ್ರಬಂಧಕರಾಗಿದ್ದ ಅಧಿಕಾರಿಗೆ ಮಾಹಿತಿ ಇರುತ್ತದೆ. ನನಗೆ ಕಡತದ ಕುರಿತಾಗಿ ಮಾತ್ರ ಮಾಹಿತಿ ಇದೆ.

6. 2012 ರಿಂದ 2014 ರವರೆಗೆ ನಮ್ಮ ಬ್ಯಾಂಕಿನಲ್ಲಿ ಶಾಖಾ ಪ್ರಬಂಧಕರಾಗಿದ್ದ ಅಧಿಕಾರಿ ಮತ್ತು ಕ್ಷೇತ್ರಾಧಿಕಾರಿ ಎಷ್ಟುಬಾರಿ ಪ್ರತಿವಾದಿಯ ನಿರ್ಮಾಣದ ಹಂತದಲ್ಲಿದ್ದ ಮನೆಯ ಬಳಿ ಹೋಗಿದ್ದರು ಎಂಬ ಬಗ್ಗೆ ಮಾಹಿತಿ ಇಲ್ಲ. ನನಗೆ 2012 ರಿಂದ 2014 ರವರೆಗಿನ ಪ್ರತಿವಾದಿಯ ಸಾಲದ ಮಂಜೂರಾತಿಯ ಕುರಿತು ಮತ್ತು ಮರುಪಾವತಿಯ ಕುರಿತು ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ನಾನು ಕಡತದ ಆಧಾರದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ.

**ಮರುವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ